163

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ನೇರ ನೇಮಕಾತಿಯ ಮೂಲಕ ಆಯ್ಕೆಯಾದ ಕೃಷಿ ಅಧಿಕಾರಿಯ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವೆಂದು ಘೋಷಿಸುವ ಕುರಿತು.

****

ಓದಲಾಗಿದೆ:

1) ಕೃಷಿ ಆಯುಕ್ತರ ಪತ್ರ ಸಂ. ಕೃಸಿಪ -5/ಪಅಘೋ/ದಾವಣಗೆರೆ/87/2010-11, ದಿನಾಂಕ: 21-05-2013

****

ಪ್ರಸ್ತಾವನೆ:-

ಸರ್ಕಾರದ ಅಧಿಸೂಚನೆ ಸಂ. ಕೃತೋಇ 91 ಕೃಪಸೇ 2006 ದಿನಾಂಕ:30-08-2008ರಲ್ಲಿ ನೇರ ನೇಮಕಾತಿ ಮೂಲಕ ಆಯ್ಕೆಯಾಗಿದ್ದ ಈ ಕೆಳಕಂಡ ಕೃಷಿ ಅಧಿಕಾರಿಯ ಎರಡು ವರ್ಷಗಳ ಸೇವಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿದ್ದು, ಈ ಅಧಿಕಾರಿಗಳ ವಿರುದ್ದ ಯಾವುದೇ ಇಲಾಖಾ ವಿಚಾರಣೆ/ಕ್ರಿಮಿನಲ್ ಮೊಕದ್ದಮೆ ಪ್ರಕರಣದ ಬಾಕಿ ಇರುವುದಿಲ್ಲವೆಂದು, ಇವರು ಎರಡು ವರ್ಷಗಳ ಅವಧಿಯಲ್ಲಿ ಅವರ ಸೇವೆಯನ್ನು ತೃಪ್ತಿಕರವಾಗಿ ನಿರ್ವಹಿಸಿದ್ದಾರೆಂದು, ಹಾಗೂ ಆಯ್ಕೆ ಅಧಿಸೂಚನೆಯಲ್ಲಿಯ ನಿರ್ದೇಶನದಂತೆ ಇವರು 2 ವರ್ಷಗಳ ಪರಿವೀಕ್ಷಣಾ ಅವಧಿಯಲ್ಲಿ ಪಾಸಾಗಬೇಕಾದ ಇಲಾಖಾ ಪರಿಕ್ಷೆಗಳು ಹಾಗೂ ಕನ್ನಡ ಭಾಷಾ ಪರೀಕ್ಷೆಗಳನ್ನು ನಿಗದಿತ ಸಮಯದಲ್ಲಿ ಪಾಸಾಗಿದ್ದಾರೆಂದು ತಿಳಿಸಿ ದಿನಾಂಕ: 26-09-2008 ರಿಂದ 19-03-2011 ರವರೆಗಿನ ಅವಧಿಯಲ್ಲಿ ಒಟ್ಟು 175 ದಿನಗಳ ಅಸಾಧಾರಣ ರಜೆಯನ್ನು ಉಪಯೋಗಿಕೊಂಡಿರುವರೆಂದು ಮತ್ತು ಕರ್ನಾಟಕ ನಾಗರೀಕ ಸೇವೆ(ಪರೀಕ್ಷಾರ್ಥ) ನಿಯಮಗಳು 1977ರ ನಿಯಮ 5(I)(ಎ)ರನ್ವಯ 5ನೇ ಕಾಲಂನಲ್ಲಿ ಕಾಣಿಸಿದ ದಿನಾಂಕದಂದು ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿದ್ದು, ಸದರಿ ಅಧಿಕಾರಿಯ ಪರಿವೀಕ್ಷಣಾ ಅವಧಿಯುನ್ನು ತೃಪ್ತಿಕರವಾಗಿ ಪೂರೈಸಿರುವರೆಂದು ಘೋಷಿಸಲು ಮೇಲೆ ಓದಲಾದ ಪತ್ರದಲ್ಲಿ ಕೃಷಿ ಆಯುಕ್ತರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

| ಕ್ರ ಸಂ | ಅಧಿಕಾರಿಯವರ ಹೆಸರು ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ | ಸೇವೆಗೆ ಸೇರಿದ ದಿನಾಂಕ | 2ವರ್ಷಪರಿವೀಕ್ಷಣಾ ಸೇವೆಯನ್ನು ಪೂರ್ಣಗೊಳಿಸಿದ ದಿನಾಂಕ | ಪರಿವೀಕ್ಷಣಾ ಅವಧಿಯನ್ನು ಘೋಷಿಸಬೇಕಾದ ದಿನಾಂಕ |
|---|---|---|---|---|
| 1 | 2 | 3 | 4 | 5 |
| 1. | ರಶ್ಮಿ.ಎಲ್ ಉಪ ಕೃಷಿ ನಿರ್ದೇಶಕರ ಕಛೇರಿ, ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿ. | 26-09-2008 ಪೂರ್ವಾಹ್ನ | 19-03-2011 ಅಪರಾಹ್ನ | 20-03-2011 ಪೂರ್ವಾಹ್ನ |
| | | ದಿನಾಂಕ: 26-09-2008 ರಿಂದ 19-03-2011ರ ವರೆಗಿನ ಅವಧಿಯಲ್ಲಿ ಒಟ್ಟು 175 ದಿನಗಳ ಅಸಾಧಾರಣ ರಜೆಯನ್ನು ಉಪಯೋಗಿಸಿಕೊಂಡಿದ್ದು ದಿನಾಂಕ: 19-03-2011ರ ಅಪರಾಹ್ನದವರೆಗೆ ಪರಿವೀಕ್ಷಣಾವಧಿಯನ್ನು ವಿಸ್ತರಿಸಲಾಗಿದೆ. | | |

ಕೃಷಿ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರ ಮೇಲ್ಕಂಡ ಕೃಷಿ ಅಧಿಕಾರಿಯು ನಿಗದಿಪಡಿಸಿದ ಎಲ್ಲಾ ಇಲಾಖಾ ಪರೀಕ್ಷೆಗಳನ್ನು ಪಾಸಾಗಿದ್ದು, ತಮ್ಮ ಖಾಯಂ ಪೂರ್ವ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುವುದರಿಂದ ಸದರಿ ಕೃಷಿ ಅಧಿಕಾರಿಯ ಎರಡು ವರ್ಷಗಳ ಪರವೀಕ್ಷಣಾ ಅವಧಿಯನ್ನು ಘೋಷಿಸಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂ. ಕೃಇ 80 ಕೃಪಸೇ 2013**
**ಬೆಂಗಳೂರು, ದಿನಾಂಕ:31-07-2013.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಸರ್ಕಾರದ ಅಧಿಸೂಚನೆ ಸಂಖ್ಯೆ: ಕೃತೋಇ 91 ಕೃಪಸೇ 2006, ದಿನಾಂಕ:30-08-2008ರಲ್ಲಿ ಕೃಷಿ ಅಧಿಕಾರಿಗಳ ವೃಂದಕ್ಕೆ ನೇರ ನೇಮಕಾತಿ ಮೂಲಕ ಆಯ್ಕೆಗೊಂಡ ಈ ಕೆಳಕಂಡ ಕೃಷಿ ಅಧಿಕಾರಿಯ ಕರ್ನಾಟಕ ನಾಗರೀಕ ಸೇವೆ (ಪರೀಕ್ಷಾರ್ಥ) ನಿಯಮಗಳು 1977ರ ನಿಯಮ 5(1)(ಎ) ರನ್ವಯ ಕಾಲಂ 5ರಲ್ಲಿ ಸೂಚಿಸಿರುವ ದಿನಾಂಕದಂದು ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವೆಂದು ಪೂರೈಸಿರುತ್ತಾರೆಂದು ಘೋಷಿಸಿ ಆದೇಶಿಸಿದೆ.

| ಕ್ರ. ಸಂ | ಅಧಿಕಾರಿಯವರ ಹೆಸರು ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ | ಸೇವೆಗೆ ಸೇರಿದ ದಿನಾಂಕ | 2ವರ್ಷಪರಿವೀಕ್ಷಣಾ ಸೇವೆಯನ್ನು ಪೂರ್ಣಗೊಳಿಸಿದ ದಿನಾಂಕ | ಪರಿವೀಕ್ಷಣಾ ಅವಧಿಯನ್ನು ಘೋಷಿಸಬೇಕಾದ ದಿನಾಂಕ |
|---|---|---|---|---|
| 1 | 2 | 3 | 4 | 5 |
| 1. | ರಶ್ಮಿ.ಎಲ್<br>ಉಪ ಕೃಷಿ ನಿರ್ದೇಶಕರ ಕಛೇರಿ, ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿ. | 26-09-2008 ಪೂರ್ವಾಹ್ನ | 19-03-2011 ಅಪರಾಹ್ನ | 20-03-2011 ಪೂರ್ವಾಹ್ನ |
| | | ದಿನಾಂಕ: 26-09-2008 ರಿಂದ 19-03-2011ರ ವರೆಗಿನ ಅವಧಿಯಲ್ಲಿ ಒಟ್ಟು 175 ದಿನಗಳ ಅಸಾಧಾರಣ ರಜೆಯನ್ನು ಉಪಯೋಗಿಸಿಕೊಂಡಿದ್ದು ದಿನಾಂಕ: 19-03-2011ರ ಅಪರಾಹ್ನದವರೆಗೆ ಪರಿವೀಕ್ಷಣಾವಧಿಯನ್ನು ವಿಸ್ತರಿಸಲಾಗಿದೆ. | | |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ,

ಇವರಿಗೆ:-
1) ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ-05), ಕರ್ನಾಟಕ ಬೆಂಗಳೂರು.

--3--

1024



2) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.(ಮೂಲ ಪ್ರಮಾಣ ಪತ್ರಗಳೊಂದಿಗೆ).
3) ಜಂಟಿ ಕೃಷಿ ನಿರ್ದೇಶಕರು, ದಾವಣಗೆರೆ.
4) ಉಪ ಕೃಷಿ ನಿರ್ದೇಶಕರು, ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿ.
5) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು.
6) ಸರ್ಕಾರದ ಉಪ ಕಾರ್ಯದರ್ಶಿ, ಕೃಷಿ ಇಲಾಖೆ ಇವರ ಆಪ್ತ ಸಹಾಯಕರಿಗೆ.
7) ಸಂಬಂಧಪಟ್ಟ ಅಧಿಕಾರಿಯವರಿಗೆ (ಕೃಷಿ ಆಯುಕ್ತರ ಮೂಲಕ)
8) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.